ಶ್ರೀ ಎಂ. ವಿ. ಕೃಷ್ಣಪ್ಪ.— ಹಿಂದಿನ ಸರಕಾರ ಎಲ್ಲವನ್ನೂ ಪರಿಶೀಲಿಸಿ 300 ಎಕರೆ ಮೇರೆ ಜಮೀನಿರುವ ಕಡೆ ಕೋ-ಆಪರೇಟಿವ್ ಫಾರ್ಮಿಂಗ್ ಮಾಡಿ ಹರಿಜನರಿಗೆ ಅವಕಾಶ ಮಾಡಿದರು. ಆದರೆ ಅವರು ನಮಗೆ ಹಣ ಮುಂತಾದ್ದು ಸಿಕ್ಕುವುದಿಲ್ಲ, ಅನೇಕ ತೊಂದರೆ ಇದೆ, ನಮಗೆ ಬೇರೆ ಎಷ್ಟಾದರೂ ಕೊಡಿ ಎಂದು ಅರ್ಜಿ ಕೊಡುತ್ತಿದ್ದಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ನಿಮ್ಮವರ್ಗದವರಿಗೆ ರಿಸರ್ವ್ ಮಾಡಿರುವ ಜಮೀನನ್ನು ಅವರ ಪೈಕಿ ಕೆಲವರು ಪದೇ ಪದೇ ಕೊಡಿ ಎಂದು ದರಖಾಸ್ತು ಕೊಡುತ್ತಿದ್ದಾರೆ. ಆದುದರಿಂದ ಎಷ್ಟು ಜನ ನಿಮ್ಮವರ್ಗದವರಿದ್ದಾರೆ, ಜಮೀನೆಷ್ಟಿದೆ ಎಂದು ನೋಡಿ ಒಂದೇ ಸಲ ಅದನ್ನೇಕೆ ಹಂಚಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರ ಜನಸಂಖ್ಯೆ ಈ ವರ್ಷ ಇದ್ದಷ್ಟೇ ಮುಂದಿನ ವರ್ಷ ಇರುವುದಿಲ್ಲ, ಅದು ಹೆಚ್ಚುತ್ತಾ ಹೋಗುವುದರಿಂದ ಹಾಗೆ ಮಾಡುವುದಕ್ಕಾಗುವುದಿಲ್ಲ.

Election to Lakkappanahally and Ugenahally Panchayats.

*Q.—279. **Sri T. MADIAH GOWDA** (Ramanagaram).—

Will the Government be pleased to state :—

(*a*) the last dates on which election has taken place for the Panchayats of the villages of Lakkappanahally and Ugenahalli in Ramanagaram Taluk ;

(*b*) who are the Chairman, Vice-Chairman and members of those Village Panchayats ;

(*c*) if the election has not taken place, the reasons for the same ;

(*d*) whether the accounts of the Village Panchayats of Lakkappanahally and Ugenahally in Ramanagaram Taluk were audited at any time within last 4 years and if so the remarks of the auditor ;

(*e*) whether it is a fact that some complaints have been made regarding the working of those Panchayats to the Assistant Commissioner and if so, with what result ;

(*f*) what are the allegations stated in those complaints ?

*A.—**Sri RAMAKRISHNA HEGDE** (Minister for Development, Panchayathi Raj and Co-operation).—

(*a*) There are no Panchayats by name Lakkappanahally and Ugenahally in Ramanagaram Taluk after the Mysore V. P. and L. B. Act of 1959 came into force.

(*b*) to (*f*) Do not arise in view of reply to clause (*a*).

ಶ್ರೀ ಟಿ. ಮಾದಯ್ಯ ಗೌಡ.—(ಅ) ಪ್ರಶ್ನೆಗೆ ಉತ್ತರವಾಗಿ ರಾಮನಗರ ತಾಲ್ಲೂಕಿನಲ್ಲಿ ಲಕ್ಕಪ್ಪನಹಳ್ಳಿ ಮತ್ತು ಉಗ್ಗೇನಹಳ್ಳಿ ಗ್ರಾಮ ಪಂಚಾಯಿತಿಗಳಿಗೆ ಕಳೆದ ಬಾರಿ ನಡೆಸಿದ ಚುನಾವಣೆಯ ದಿನಾಂಕಗಳನ್ನು ತಿಳಿಸಿ ಎಂದು ಕೇಳಿದ್ದಕ್ಕೆ ಉತ್ತರವಾಗಿ 1959ನೇ ಇಸವಿಯ ಅಕ್ಟ್ ಪ್ರಕಾರ ಗ್ರಾಮ ಪಂಚಾಯಿತಿಗಳಿರುವುದಿಲ್ಲ ಎಂದು ಅಪ್ಪಣೆ ಕೊಡಿಸಿದ್ದಾರೆ. ಯಾವಾಗಲಾದರೂ ಈ ಪಂಚಾಯಿತಿಗಳಿದ್ದುವೇ, ಅವು ಇದ್ದರೆ ಚುನಾವಣೆಗಳು ನಡೆದುವೇ, ಚುನಾವಣೆಗಳನ್ನು ನಡೆಸಿದವರು ಯಾರು ಎಂಬುದನ್ನು ದಯೆಪಿಟ್ಟು ತಿಳಿಸಬೇಕು ಸ್ವಾಮಿ.

Sri KONDAJJI BASAPPA.—Now there are no panchayats in those two villages. Out of these two villages, Ugenahalli is the hamlet of another revenue village called Jakkanahalli. Lakkappanahally is

(SRI KONDAJJI BASAPPA)

another panchayat. These two were two independent village panchayats prior to the 1959 Act coming into force. After it came into force, these two along with Bannikuppa formed a group panchayat. So, the answer has been given like that.

ಶ್ರೀ ಟಿ. ಮಾದಯ್ಯ ಗೌಡ.—1959ನೇ ಆಕ್ಟ್ ಬಂದ ಮೇಲೆ ಗ್ರಾಮ ಪಂಚಾಯಿತಿಯ ಕಾರ್ಯಕ್ರಮ ನಡೆಯುತ್ತಿದೆಯೇ ? ಹಾಗಿದ್ದರೆ ಯಾರು ನಡೆಸುತ್ತಿದ್ದಾರೆ ಸ್ವಾಮಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಗ್ರಾಮ ಪಂಚಾಯಿತಿಯೇ ಕಾನ್‌ಸ್ಟಿಟ್ಯೂಟ್ ಆಗಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಈ ಗ್ರಾಮಗಳಲ್ಲಿ 1959ನೇ ಆಕ್ಟ್ ಪ್ರಕಾರ ಚುನಾವಣೆಗಳು ಆಗಲಿಲ್ಲವೆಂದ ಮೇಲೆ ಅಲ್ಲಿಗೆ ಯಾವನ್ನಾದರೂ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿದ್ದೀರಾ ಸ್ವಾಮಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಅಲ್ಲಿ ಮೊದಲು 11-4-1960 ಚುನಾವಣೆ ದಿನವನ್ನು ಗೊತ್ತು ಮಾಡಿ ನೋಟಿಫಿಕೇಷನ್ ಹೊರಡಿಸಿದರು. 13 ಸೀಟುಗಳಲ್ಲಿ ಮೂರು ಸ್ಥಾನಗಳಿಗೆ ಅವಿರೋಧವಾಗಿ ಮೂರು ಜನ ಆರಿಸಿ ಬಂದರು. ಇನ್ನು 10 ಜನರ ಚುನಾವಣೆ ಆಗುವುದಿತ್ತು. ಚುನಾವಣೆ ತಾರೀಖಿಗೆ ಮುಂಚಿತವಾಗಿಯೇ ವೋಟರುಗಳ ಪಟ್ಟಿಯಿಂದ ಹೆಸರುಗಳು ಬಿಟ್ಟು ಹೋಗಿವೆಯೆಂದು ತಕರಾರು ಬಂದುದರಿಂದ ಡೆಪ್ಯುಟಿ ಕಮಿಷನರು ಇನ್ನೊಂದು ನೋಟಿಫಿಕೇಷನ್ ಹೊರಡಿಸಿದರು. ಅದರ ಮೇಲೆ ಹೈಕೋರ್ಟಿಗೆ ರಿಟ್ ಹೋದರು. ಹೈಕೋರ್ಟಿನಲ್ಲಿ ಎರಡು ವರ್ಷ ಕಾಲ ಆದ ಮೇಲೆ ಅದು ತೀರ್ಮಾನವಾಯಿತು. ಅವರ ಆರ್ಡರ್ ಮೇರೆಗೆ ಹೊಸ ತಾರೀಖುಗಳನ್ನು ಗೊತ್ತು ಮಾಡಿದರು. ಕೆಲವು ಅನಕ್ತ ಜನರು ಇದರ ಮೇಲೆ ಹೈಕೋರ್ಟಿಗೆ ರಿಟ್ ಹಾಕಿದ್ದಾರೆ. ಈ ವಿಷಯ ಇನ್ನೂ ಹೈಕೋರ್ಟಿನಲ್ಲಿ ಉಳಿದಿದೆ.

ಶ್ರೀ ಟಿ. ಮಾದಯ್ಯ ಗೌಡ.—ಯಾವಾಗ ಕಾರಣಾಂತರದಿಂದ ಗ್ರಾಮ ಪಂಚಾಯಿತಿಗೆ ಚುನಾವಣೆಗಳು ಆಗಲಿಲ್ಲವೋ ಆಗ ಅಲ್ಲಿಗೆ ಒಬ್ಬ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಬೇಕು ಎಂದು ಕಾನೂನಿನಲ್ಲಿದ್ದರೂ ಕೂಡ ಆ ರೀತಿ ಏಕೆ ಯಾರನ್ನೂ ನೇಮಕ ಮಾಡುವುದಕ್ಕಾಗಿಲ್ಲ ಸ್ವಾಮಿ ?

Sri KONDAJJI BASAPPA.—There is a stay from the High Court. So, how can an Administrator be appointed ?

Breach of the Bychapura Amani Tank.

*Q.—316. Sri R. N. LAKSHMIPATHI (Gauribidanur).—

Will the Government be pleased to state :—

(*a*) how many times the Bychapura Amani Tank in Gauribidanur Taluk breached ;

(*b*) whether any investigation has been ordered in the matter ;

(*c*) if so, what are the findings of the investigation.

*A.—Sri ALUR HANUMANTHAPPA (Deputy Minister for Minor Irrigation).—

(*a*) Only once.

(*b*) No.

(*c*) Does not arise in view of reply to clause (*b*).

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಕೆರೆ ಯಾವಾಗ ಒಡೆಯಿತು ; ಅದಕ್ಕೆ ಕಾರಣವೇನು ?